ಶ್ರೀ ಕೆ.ಎಂ. ಕೃಷ್ಣಮೂರ್ತಿ : ನನ್ನ ಅಭಿಪ್ರಾಯವನ್ನು ತಿಳಿಸುತ್ತೇನೆ. ಕಳೆದ ವರ್ಷ ರಾಜೀವ್‌ಗಾಂಧಿ ಡ್ರಿಂಕಿಂಗ್ ವಾಟರ್ ಮಿಷನ್‌ನಿಂದ ಸರ್ವೆ ಆಗಿ, ಚಿಕ್ಕಮಗಳೂರು ತರೀಕೆರೆ, ಕಡೂರು, ತಾಲ್ಲೂಕುಗಳಲ್ಲಿ ಫ್ಲೋರೈಡ್, ನೈಟ್ರೇಟ್ ಕಬ್ಬಿಣದ ಅಂಶ ಎಲ್ಲಿ ಜಾಸ್ತಿ ಇದೆ ಎಂದು ಸರ್ವೆ ಮಾಡಿದ ಊರುಗಳಲ್ಲಿ ತರೀಕೆರೆ ತಾಲ್ಲೂಕಿನಲ್ಲಿ ಎಲ್ಲಿ ವಾಂತಿ-ಭೇದಿಯಾಗಿದೆ ಈ ಗ್ರಾಮಗಳೂ ಸೇರಿವೆ. ಈಗಾಗಲೇ ಕೆಲವೊಂದು ಗ್ರಾಮಗಳಿಗೆ ರಾಜೀವ್‌ಗಾಂಧಿ ಡ್ರಿಂಕಿಂಗ್ ವಾಟರ್ ಮಿಷನ್‌ನಿಂದ ಹಣ ಮಂಜೂರಾಗಿದೆ. ಸರ್ಕಾರದವರು ಎಸ್ಟಿಮೇಟ್ ಮಾಡಿ ಅದಕ್ಕೆ ಕಳುಹಿಸಿದ್ದಾರೆ. ಆದರೆ ಏನಾಗಿದೆ ಅಂದರೆ ಶೇಕಡ 10 ಭಾಗ ಹಣವನ್ನು ಸ್ಥಳೀಯರು ಕಟ್ಟಬೇಕೆಂದರೆ, ಇಂಥ ಬರಗಾಲ ಪರಿಸ್ಥಿತಿಯಲ್ಲಿ ಆ ಗ್ರಾಮೀಣ ಜನರು ಎಲ್ಲಿಂದ ಕಟ್ಟುತ್ತಾರೆ? ಅದನ್ನು ಹೇಗೆ ಮಾಡಲಿಕ್ಕೆ ಸಾಧ್ಯವಾಗುತ್ತದೆ? ನಾನು ಈ ವಿಚಾರವನ್ನು ತಮ್ಮ ಮೂಲಕ ಸಚಿವರಲ್ಲಿ ಕೇಳುತ್ತಿದ್ದೇನೆ. ಆರೋಗ್ಯ ಇಲಾಖೆಯವರು ಏನಾದರೂ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಅಲ್ಲಿ ಸರಿಯಾದ ವೈದ್ಯರಿಲ್ಲ; ದಾದಿಯರಿಲ್ಲ. ಕುಂಟಮಡುವಿನಿಂದ ರೋಗಿಗಳನ್ನು ತರೀಕೆರೆ, ಕಡೂರು ಆಸ್ಪತ್ರೆಗಳಿಗೆ ತರಬೇಕಾದ ವ್ಯವಸ್ಥೆಯಾಗಿದೆ. ಏನಾದರೂ ಸರಿಯಾದ ಶುಶ್ರೂಷೆ ಸಿಗದಿದ್ದರೆ, ಕೊನೆಪಕ್ಷ ಇನ್ನೂ 8-10 ಜನರು ಸಾಯುತ್ತಿದ್ದರು. ತರೀಕೆರೆ, ಬೀರೂರು, ಕಡೂರು ವಿಧಾನ ಸಭಾ ಕ್ಷೇತ್ರಗಳಿರಬಹುದು, ಅದರ ಬಗ್ಗೆ ಮಾನ್ಯ ಸಚಿವರು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇದರ ಬಗ್ಗೆ ಗ್ರಾಮೀಣಾಭಿವೃದ್ಧಿ ಸಚಿವರೂ ಉತ್ತರಿಸಬೇಕಾಗುತ್ತದೆ, ಆರೋಗ್ಯ ಸಚಿವರೂ ಉತ್ತರಿಸಬೇಕಾಗುತ್ತದೆಂದು ನಾನು ತಮ್ಮ ಮೂಲಕ ಮಾನ್ಯ ಆರೋಗ್ಯ ಸಚಿವರ ಗಮನ ಸೆಳೆಯಬಯಸುತ್ತೇನೆ.

(ಇ) ಬಾಗೇಪಲ್ಲಿ ಕ್ಷೇತ್ರದ ರಸ್ತೆ ರಿಪೇರಿಯ ಬಗ್ಗೆ.

ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ಗ್ರಾಮೀಣಾಭಿವೃದ್ಧಿ ಸಚಿವರಿಗೆ ತಿಳಿಸಬಯಸುತ್ತೇನೆ ಆದರೆ ಅವರು ಇಲ್ಲಿ ಇಲ್ಲ. ಮಾನ್ಯ ಲೋಕೋಪಯೋಗಿ ಇಲಾಖೆ ಸಚಿವರು ಇದ್ದಾರೆ. ಗಡಿನಾಡು ಪ್ರದೇಶವಾದ ಬಾಗೇಪಲ್ಲಿಯಲ್ಲಿರುವುದೇ ಎರಡನೇ ರಸ್ತೆ, ಆ ಎರಡು ರಸ್ತೆಗಳಲ್ಲಿ ಎರಡು ಸೇತುವೆಗಳಿದ್ದು, ಒಂದು ಗ್ರಾಮೀಣಾಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟಿದ್ದು ಇದು ಸುಮಾರು 50 ವರ್ಷಗಳ ಹಳೆಯ ಸೇತುವೆಯಾಗಿದೆ. ಈ ಸೇತುವೆ ಕಳೆದ ನಾಲ್ಕು ತಿಂಗಳುಗಳ ಹಿಂದೆ ಕುಸಿದು ಬಿದ್ದು ಹೋಗಿರುವುದರಿಂದ ರಸ್ತೆ ಇಲ್ಲದೆ ಓಡಾಡಲಿಕ್ಕೆ ಬಹಳ ತೊಂದರೆಯಾಗಿದೆ. ಮತ್ತೊಂದು ರಸ್ತೆ ಲೋಕೋಪಯೋಗಿ ಇಲಾಖೆಗೆ ಸೇರಿದ್ದು, ಇದು ದುರಸ್ತಿಯಲ್ಲಿದ್ದು ಕೆಲವು ದಿವಸಗಳಲ್ಲಿ ಅಲ್ಲಿರುವ ಸೇತುವೆ ಕುಸಿದು ಬೀಳುವ ಸಂಭವ ಇದೆ. ನಾನು ನನ್ನ ಶಾಸಕರ ನಿಧಿಯಿಂದ ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟು ಸಣ್ಣದಾಗಿ ದುರಸ್ತಿ ಕಾರ್ಯ ಮಾಡಿಸುತ್ತಿದ್ದೇವೆ. ಗ್ರಾಮೀಣಾಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟ ಸೇತುವೆ ಬಿದ್ದು 4 ತಿಂಗಳಾದರೂ ಕೂಡ ಸಂಬಂಧಪಟ್ಟ ಅಧಿಕಾರಿಗಳಾಗಲೀ ಅಥವಾ ಉಸ್ತುವಾರಿ ಸಚಿವರಾಗಲೀ ಅದರ ಬಗ್ಗೆ ಒಂದು ಕಾಳಜಿಯನ್ನು ತೆಗೆದುಕೊಂಡು ದುರಸ್ತಿ ಕೆಲಸ ಮಾಡಲಿಕ್ಕೆ ತಯಾರು ಮಾಡಿಲ್ಲ. ಲೋಕೋಪಯೋಗಿ ಇಲಾಖೆಗೆ ಬರುವ ಸೇತುವೆ ಕುಸಿದು ಹೋದರೆ ಬಾಗೇಪಲ್ಲಿ ಎಂಬುದು ಒಂದು ದ್ವೀಪವಾಗುತ್ತದೆ ಏಕೆಂದರೆ ರಸ್ತೆಯೇ ಅಲ್ಲಿ ಇಲ್ಲದ ಹಾಗೆ ಆಗುತ್ತದೆ. ಈ ಭಾಗದ ಜನಗಳಿಗೆ ಈ ಅಧಿಕಾರಿಗಳು ತೋರಿಸುವ ತಾರತಮ್ಯದಿಂದಾಗಿ ಇವತ್ತು ನಾವು ಯಾವ

ರೀತಿಯ ಕಷ್ಟ ಅನುಭವಿಸುತ್ತಿದ್ದೇವೆಂದು ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ಹೀಗಿದ್ದರೂ ಕೂಡ ಅಧಿಕಾರಿಗಳಾಗಲೀ ಸಂಬಂಧಪಟ್ಟ ಮಂತ್ರಿಗಳಾಗಲೀ ಯಾರೂ ಕೂಡ ಕಾಳಜಿ ವಹಿಸಿಲ್ಲ. ಗ್ರಾಮೀಣಾಭಿವೃದ್ಧಿ ಇಲಾಖೆಗೆ ಸೇರಿದ ಸೇತುವೆ ಕುಸಿದಿದ್ದರೂ ಇದರ ಬಗ್ಗೆ ಹೇಳಿಕೆ ಕೊಟ್ಟಿಲ್ಲ. ಇವತ್ತು ನಾವು ಎಂತಹ ಪರಿಸ್ಥಿತಿಯಲ್ಲಿದ್ದೇವೆಂದರೆ ಇನ್ನು ಕೆಲವೇ ದಿವಸ ಈವೊಂದು ಲೋಕೋಪಯೋಗಿ ಇಲಾಖೆಯ ಸೇತುವೆ ಕೂಡ ಬೀಳುವ ಸಂದರ್ಭವಿದೆ. ಚಿತ್ರಾವತಿ ನದಿಗೆ ಅಡ್ಡಲಾಗಿರುವ ಈ ಸೇತುವೆಯ ಬಗ್ಗೆ ನಾನು ಏಕೆ ತಮ್ಮ ಗಮನಕ್ಕೆ ತರುತ್ತೇನೆಂದರೆ, ಮುಂದೆ ಆಗುವ ಅನಾಹುತವನ್ನು ತಪ್ಪಿಸಬೇಕೆಂದು ನಾನು ಅನೇಕ ಸಾರಿ ಇದರ ಬಗ್ಗೆ ಅರ್ಜಿ ಕೊಟ್ಟಿದ್ದೇನೆ. ಇದರ ಬಗ್ಗೆ ನನಗೆ ಉತ್ತರ ಬೇಕಾಗುತ್ತದೆ.

ಅಧ್ಯಕ್ಷರು : ಇವತ್ತು ರೈಸ್ ಮಾಡಿದ್ದೀರಿ ನಾಳೆ ಅಥವಾ ನಾಡಿದ್ದು ಉತ್ತರ ಕೊಡಿಸಲಿಕ್ಕೆ ನೋಡೋಣ ಮಾನ್ಯ ಗುತ್ತೇದಾರ್‌ರವರೇ, ತಾವು ಪ್ರಾರಂಭಿಸಿ.

ಶ್ರೀ ಸುಭಾಷ್ ಆರ್. ಗುತ್ತೇದಾರ್ : ಮಾನ್ಯ ಅಧ್ಯಕ್ಷರೆ, ಇಂಧನ ರಾಜ್ಯ ಸಚಿವರನ್ನು ಕೇಳಬಯಸುತ್ತೇನೆ ಆದರೆ ಸಚಿವರು ಈಗ ಇಲ್ಲ. ಹೀಗಾಗಿ ಅವರು ಬಂದ ಮೇಲೆ ನನಗೆ ಅವಕಾಶ ಕೊಡಿ.

ಅಧ್ಯಕ್ಷರು : ಆಯಿತು ನಾಳೆ ನೀವು ಮಾತನಾಡಿ. ಮಾನ್ಯ ನಾರಾಯಣಸ್ವಾಮಿಯವರೆ, ತಾವು ಮಾತನಾಡಿ ಒಂದು ನಿಮಿಷದಲ್ಲಿ ಮಾತನಾಡಿ ಎಲ್ಲರೂ ವಿವರವಾಗಿ ಹೇಳಿದರೆ ಹೇಗೆ? ಒಂದೊಂದು ನಿಮಿಷದಲ್ಲಿ ರೈಸ್ ಮಾಡಿದರಾಯಿತು.

ಶ್ರೀ ಎ. ನಾರಾಯಣ ಸ್ವಾಮಿ : ಬಹಳ ಗಂಭೀರವಾಗಿರುವ ವಿಷಯವನ್ನು ಈ ಸಭೆಯ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ಪ್ರತಿಯೊಬ್ಬ ಸದಸ್ಯರು ಹೇಳುವುದು ಗಂಭೀರವಾದ ವಿಚಾರವಾಗಿರುತ್ತದೆ. ಗಂಭೀರವಾಗಿ ಇಲ್ಲದಿದ್ದರೆ ಯಾರೂ ಹೇಳುವುದಿಲ್ಲ. ಸಂಕ್ಷಿಪ್ತವಾಗಿ ಹೇಳಿ

ಶ್ರೀ ಎ. ನಾರಾಯಣಸ್ವಾಮಿ : ನಾನು ಹೇಳಿದ ಮೇಲೆ ತಮಗೆ ಗೊತ್ತಾಗುತ್ತದೆ. ಸಂಕ್ಷಿಪ್ತವಾಗಿ ಹೇಳುತ್ತೇನೆ. ಇದೀಗ ತಾನೆ ಚರ್ಚೆಯಾಯಿತು. ಸೂಲಿಬೆಲೆಯಲ್ಲಿ ದಲಿತರ ಕಗ್ಗೊಲೆ ನಡೆದಿರುವ ಬಗ್ಗೆ ನಮ್ಮ ಶಾಸಕ ಮಿತ್ರರು ಒಂದು ಮಾತು ಹೇಳಲಿಲ್ಲ, ಈ ಬೆಂಗಳೂರು ಸುತ್ತಮುತ್ತ ಲ್ಯಾಂಡ್ ಮಾಫಿಯ ಹಾವಳಿ ಜಾಸ್ತಿಯಾಗಿದೆ.

ಅಧ್ಯಕ್ಷರು : ಆ ವಿಷಯ ಈಗ ಹೇಳಿ ಆಯಿತಲ್ಲವೆ? ನಿಮ್ಮ ನಾಯಕರೇ ಹೇಳಿದ ಹಾಗೆ ಬೇರೆ ದಿವಸ ಇದರ ಬಗ್ಗೆ ತೆಗೆದುಕೊಳ್ಳೋಣ ಎಂದು ಹೇಳಿದ್ದೇವೆ ಅಲ್ಲವೇ? ಅದರ ಬಗ್ಗೆ ನೀವು ಮಾತನಾಡಬೇಡಿ ಬೇರೆ ವಿಷಯ ಇದ್ದರೆ ಹೇಳಿ. ನಾಳೆ ನಾಡಿದ್ದು ತೆಗೆದುಕೊಳ್ಳೋಣವೆಂದು ತೀರ್ಮಾನವಾಗಿದೆ.

ಶ್ರೀ ಎ. ನಾರಾಯಣಸ್ವಾಮಿ : ಆ ವಿಚಾರ ಹೇಳುವುದಿಲ್ಲ. ಬೇರೆ ವಿಚಾರ ಹೇಳುತ್ತೇನೆ. ಬೆಂಗಳೂರಿನ ಸುತ್ತಮುತ್ತ ಲ್ಯಾಂಡ್ ಮಾಫಿಯ ಜೊತೆಯಲ್ಲಿ ಸರ್ಕಾರದ ಅಧಿಕಾರಿಗಳು ಷಾಮೀಲಾಗಿರುವುದರಿಂದ ಈ ಕೊಲೆಗಳಿಗೆ ಕಾರಣವಾಗುತ್ತದೆ.

ಅಧ್ಯಕ್ಷರು: ನಾಳೆ ಆ ವಿಚಾರ ಬಂದಾಗ ಮಾತನಾಡಿ. ನಾಳೆ ನಾಡಿದ್ದು ಈ ವಿಚಾರ ತೆಗೆದುಕೊಂಡಾಗ ನಾನು ನಿಮಗೆ ಅವಕಾಶ ಕೊಡುತ್ತೇನೆ ಆಗ ತಾವು ಮಾತನಾಡಿ. ಪುನಃ ರಿಪೀಟ್ ಆಗುವುದು ಬೇಡ.